# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 2018-19ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಬಗ್ಗೆ.

ಓದಲಾದ

1. ಸರ್ಕಾರದ ಆದೇಶ ಸಂಖ್ಯೆ:MWD 175 MDS 2016 ದಿನಾಂಕ:03-01-2017 ಮತ್ತು ತಿದ್ದುಪಡಿ ಆದೇಶ ದಿನಾಂಕ:27-01-2017.
2. ಸರ್ಕಾರದ ಆದೇಶ ಸಂಖ್ಯೆ: MWD 257 MDS 2018 ದಿನಾಂಕ :11-04-2018, 30-07-2018, 15-10-2018 ಮತ್ತು 11-01-2019
3. ಸರ್ಕಾರದ ಆದೇಶ ಸಂಖ್ಯೆ: MWD 101 WES 2018 (1),(2) &(3) ದಿನಾಂಕ :14-09-2018 ,06-12-2018 ಮತ್ತು 18-12-2018
4. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಅಸಂನಿ/ಮದರಸ/ಸಿಆರ್-/2018-19, ದಿನಾಂಕ:25-01-2019.

******

**ಪ್ರಸ್ತಾವನೆ:**

ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ 2016-17ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಿಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಯೋಜನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮೇಲೆ ಓದಲಾದ ಕ್ರ.ಸಂ.(1) ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(2) ರಲ್ಲಿ ಮದರಸದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸಲುವಾಗಿ (Providing quality Education in Madrasa) 2018-19ನೇ ಸಾಲಿನ ಆಯವ್ಯಯ **ಲೆಕ್ಕ ಶೀರ್ಷಿಕೆ 2225-03-102-3-10(103)** ಸರ್ಕಾರದಿಂದ ರೂ.40.00ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಅದರಲ್ಲಿ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಒಟ್ಟು ರೂ.40.00ಕೋಟಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ರಾಜ್ಯದ 29 ಜಿಲ್ಲೆಗಳಲ್ಲಿರುವ 94 ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣಕ್ಕಾಗಿ ರೂ.8,55,00000/-ಗಳನ್ನು ಮಂಜೂರು ಮಾಡಲಾಗಿರುತ್ತದೆ. ಅದರಲ್ಲಿ ಉಳಿಕೆ ರೂ.31.45ಕೋಟಿಗಳಿರುತ್ತದೆ.